RNU AIR DHARWAD

**DECEMBER 23,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿಕಸಿತ ಭಾರತದ ಕನಸನ್ನು ನನಸಾಗಿಸಲು ದೇಶದ ಪ್ರತಿಯೊಬ್ಬ ಮಗುವಿಗೂ ಉತ್ತಮ ಶಿಕ್ಷಣ ನೀಡಬೇಕಿದೆ. ಹಿಂದುಳಿದ ಶಾಲೆಗಳ ಭೌತಿಕ ಅಭಿವೃದ್ಧಿ ನಿಟ್ಟಿನಲ್ಲಿ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು ಸಮರ್ಥವಾಗಿ ವಿನಿಯೋಗಿಸಲಾಗುತ್ತಿದೆ ಎಂದು ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನ ಖಾತೆ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು. ಧಾರವಾಡ ತಾಲೂಕು, ಹೆಬ್ಬಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆಯಲ್ಲಿ ಎನ್.ಟಿ.ಪಿ.ಸಿ ಕಂಪನಿಯ ಸಾಮಾಜಿಕ ಹೊಣೆಗಾರಿಕೆ ನಿಧಿಯಿಂದ, 54 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಹೊಂದಲಿರುವ ನೂತನ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಿ, ಶಾಲೆಗೆ 125 ಮೇಜುಗಳನ್ನು ವಿತರಿಸಿ ಅವರು ಮಾತನಾಡಿದರು.**

<><><>

**ವಿಜಯಪುರದಲ್ಲಿ ಆಯೋಜಿಸಲಾದ ವೃಕ್ಷಥಾನ್_ಹೆರಿಟೇಜ್_ರನ್ 2024 ಯಶಸ್ವಿಯಾಗಿ ಜರುಗಿತು ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ ಪಾಟೀಲ ತಿಳಿಸಿದ್ದಾರೆ. ಜ್ಞಾನ ಯೋಗಾಶ್ರಮದ, ಶ್ರೀ ಸಿದ್ದೇಶ್ವರ ಸ್ವಾಮೀಜಿ ಸ್ಮರಣಾರ್ಥ ಆಯೋಜಿತ, ವೃಕ್ಷಥಾನ್– ಹೆರಿಟೇಜ್ ರನ್ ಕುರಿತು, ಹೆಚ್ಚಿನ ಮಾಹಿತಿ ನೀಡಿದ್ದಾರೆ, ಧಾರವಾಡ ಪ್ರಾದೇಶಿಕ ಸುದ್ದಿ ವಿಭಾಗದ, ಸಂಪಾದಕೀಯ ಕಾರ್ಯನಿರ್ವಾಹಕ ಹರ್ಷವರ್ಧನ ಶೀಲವಂತ ಅವರು . . .**

<><><>

***'ಬನ್ನಿ ಪರಿಸರಕ್ಕಾಗಿ, ಜೊತೆಯಾಗಿ ಹೆಜ್ಜೆ ಹಾಕೋಣ' ಎಂಬ ಧ್ಯೇಯದೊಂದಿಗೆ, ಐತಿಹಾಸಿಕ ಪಾರಂಪರಿಕ ತಾಣಗಳ ಮೂಲಕ, 5, 10 ಹಾಗೂ 21 ಕಿಲೋ ಮೀಟರ್‌ಗಳ ವೃಕ್ಷಥಾನ್‌ಗೆ, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಚಾಲನೆ ನೀಡಿದರು.***

***ಬೃಹತ್ ಕೈಗಾರಿಕೆ ಖಾತೆ ಸಚಿವ ಎಂ.ಬಿ. ಪಾಟೀಲ ಅವರು, ಸ್ವತಃ 5 ಕಿಲೋ ಮೀಟರ್ ಮ್ಯಾರಾಥನ್ ಓಟದಲ್ಲಿ ಪಾಲ್ಗೊಂಡಿದ್ದು, ವಿಶೇಷ.***

***'ವೃಕ್ಷಥಾನ್ ಪಾರಂಪರಿಕ ಓಟ', ಬಯಲು ಸೀಮೆಯ ನಾಡಿನಲ್ಲಿ, ಪರಿಸರ ಹಾಗೂ ಐತಿಹಾಸಿಕ ತಾಣಗಳ ಬಗ್ಗೆ, ಜಾಗೃತಿ ಮೂಡಿಸಿ, ಬಸವನಾಡು ಪರಂಪರೆ ಮತ್ತು ಕಾಳಜಿಯ ಕೇಂದ್ರವಾಗಿ, ರಾಜ್ಯಕ್ಕೆ ಮಾದರಿಯಾಗುವಂತೆ, ರೂಪಿಸುವ ಕನಸು ಹೊಂದಿದ್ದಾಗಿ, ಸಚಿವ ಎಂ.ಬಿ. ಪಾಟೀಲ, ಆಶಯ ತಿಳಿಸಿದರು.***

*ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ, 10 ಸಾವಿರಕ್ಕೂ ಹೆಚ್ಚು ಓಟಗಾರರು ಪಾಲ್ಗೊಂಡಿದ್ದರು. 60 ನಗದು ಪುರಸ್ಕಾರಗಳನ್ನು ನೀಡಿ, ಗೆದ್ದವರನ್ನು ಸತ್ಕರಿಸಲಾಯಿತು.*

<><><>

ಯೋಗ, ಪ್ರಾಣಾಯಾಮ ಮತ್ತು ಧ್ಯಾನ ಸದಾ ಹಸನ್ಮುಖಿಯಾಗಿಸುತ್ತವೆ. ದೈಹಿಕ ಹಾಗೂ ಮಾನಸಿಕ ಸುದೃಢತೆ ಒದಗಿಸುತ್ತವೆ ಎಂದು, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿವಗಂಗಾ ಯೋಗ ಕೇಂದ್ರದ, ಯೋಗ ಗುರು ಸಿ.ವಿ. ರುದ್ರಾರಾಧ್ಯ ಹೇಳಿದ್ದಾರೆ. ಶಿವಮೊಗ್ಗದ ಕಲ್ಲಹಳ್ಳಿಯಲ್ಲಿ, ವಿಶ್ವ ಧ್ಯಾನ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ, ವಿಶೇ ʼ ಧ್ಯಾನ ಶಿಬಿರಕ್ಕೆ ಚಾಲನೆ ನೀಡಿ, ಮಾತನಾಡಿದರು. ಪ್ರಪಂಚದ 197 ದೇಶಗಳಲ್ಲಿ ಭಾರತದ ಯೋಗ, ಪ್ರಾಣಾಯಾಮ, ಧ್ಯಾನಕ್ಕೆ ವಿಶೇ ʼ ಮಹತ್ವ ನೀಡಲಾಗಿದೆ, ಎಂದರು.

<><><>

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಆಯೋಜಿತ, ಕುಂಭಮೇಳಕ್ಕೆ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿಯಂತ್ರಿಸಲು, ನೈಋತ್ಯ ರೈಲ್ವೆ, ಮೈಸೂರಿನಿಂದ ಪ್ರಯಾಗ್‌ರಾಜ್ ಗೆ, ವಿಶೇ ʼ ಏಕಮುಖ ಎಕ್ಸ್‌ಪ್ರೆಸ್ ರೈಲು, 06215 ವ್ಯವಸ್ಥೆ ಮಾಡಿದೆ ಎಂದು, ನೈಋತ್ಯ ರೈಲ್ವೆ, ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಮಂಜುನಾಥ ಕನಮಡಿ ತಿಳಿಸಿದ್ದಾರೆ.ಇಂದು ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ಮೈಸೂರಿನಿಂದ ಹೊರಟು, ಬುಧವಾರ ಮಧ್ಯಾಹ್ನ 3 ಗಂಟೆಗೆ, ಪ್ರಯಾಗ್ ರಾಜ್ ಜಂಕ್ಷನ್ ತಲುಪಲಿದೆ.

<><><>

ಕ್ರಿಸ್ ಮಸ್ ಹಬ್ಬದ ಪ್ರಯುಕ್ತ ಪ್ರಯಾಣಿಕ ದಟ್ಟಣೆ ತಪ್ಪಿಸಲು ನೈಋತ್ಯ ರೈಲ್ವೆಯು ಸರ್ .ಎಂ ವಿಶ್ವೇಶ್ವರಾಯ ಟರ್ಮಿನಲ್ ಬೆಂಗಳೂರು–ಕಲಬುರಗಿ ನಿಲ್ದಾಣಗಳ ನಡುವೆ ಎರಡು ಟ್ರಿಪ್ ವಿಶೇಷ ರೈಲುಗಳನ್ನು ಓಡಿಸಲು ನಿರ್ಧರಿಸಿದೆ. ಬೆಂಗಳೂರು ವಿಶ್ವೇಶ್ವರಾಯ ಟರ್ಮಿನಲ್ ನಿಂದ ಬೆಂಗಳೂರು –ಕಲಬುರಗಿ ರೈಲು, 24 ನೇ ತಾರೀಖಿನಂದು ರಾತ್ರಿ 9.15 ಕ್ಕೆ ಹೊರಡಲಿದೆ. 23 ಹಾಗೂ 25 ನೇ ತಾರೀಖಿನಂದು ಬೆಳಗ್ಗೆ 9.34 ಕ್ಕೆ ಕಲಬುರಗಿಯಿಂದ ಹೊರಡಲಿರುವ ರೈಲು ರಾತ್ರಿ 8 ಗಂಟೆಗೆ ಬೆಂಗಳೂರು ತಲುಪಲಿದೆ.

<><><>

ಪ್ರಧಾನಿ ನರೇಂದ್ರ ಮೋದಿ ಅವರು, ಇದೇ 29 ರಂದು ಆಕಾಶವಾಣಿಯಲ್ಲಿ ಪ್ರತಿ ತಿಂಗಳು ಪ್ರಸಾರವಾಗುವ ತಮ್ಮ ಜನಪ್ರಿಯ 'ಮನ್ –ಕಿ ಬಾತ್' ಕಾರ್ಯಕ್ರಮದಲ್ಲಿ ದೇಶ ಮತ್ತು ವಿದೇಶಗಳಲ್ಲಿರುವ ಭಾರತೀಯರನ್ನುದ್ದೇಶಿಸಿ ಮಾತನಾಡಲಿದ್ದಾರೆ. ಬೆಳಗ್ಗೆ 11 ಗಂಟೆಗೆ ಈ ಕಾರ್ಯಕ್ರಮ ಪ್ರಸಾರವಾಗಲಿದ್ದು, ಇದು ಮನ್ ಕಿ ಬಾತ್‌ನ 117ನೇ ಅವತರಣಿಕೆಯಾಗಿದೆ. ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳಲ್ಲಿ, ಆಕಾಶವಾಣಿ ಸುದ್ದಿ ಜಾಲತಾಣ, ಮೊಬೈಲ್ ಆಪ್ ಹಾಗೂ ಯೂಟ್ಯೂಬ್ ಚಾನಲ್‌ಗಳಲ್ಲೂ ಈ ಕಾರ್ಯಕ್ರಮ ಮೂಡಿಬರಲಿದೆ.

<><><>

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘ ಆಯೋಜಿಸಿದ್ದ ಧರೆಗೆ ದೊಡ್ಡವರು' ಸರಣಿ ವಿಚಾರ ಸಂಕಿರಣದಲ್ಲಿ, ಅನನುಕೂಲತೆಯಿಂದ ಭಾಗವಹಿಸಲಾಗದ ...ನಿವೃತ್ತ ಐ.ಎ.ಎಸ್ ಅಧಿಕಾರಿ ಚಿರಂಜೀವ್ ಸಿಂಗ್, ಪರಿಸರ ತಜ್ಞ ಎ.ಎನ್ ಯಲ್ಲಪ್ಪ ರೆಡ್ಡಿ ಅವರಿಗೆ, ಬೆಂಗಳೂರಿನಲ್ಲಿ ಹಾಗೂ ಮೈಸೂರಿನಲ್ಲಿ ಕನ್ನಡ ವ್ಯಾಕರಣ ಪಂಡಿತ ಡಿ.ಎನ್ ಶಂಕರ ಭಟ್ ಅವರಿಗೆ ಸಂಘದ ಪದಾಧಿಕಾರಿಗಳು ಮನೆಗೆ ತೆರಳಿ ಗೌರವಾರ್ಪಿಸಿದ್ದಾರೆ.

<><><>

ಕರ್ನಾಟಕದ ಸಾಕ್ಷ್ಯ ಸಂತೋಷ್ ಉದ್ಯಾನನಗರಿಯಲ್ಲಿ ಮುಕ್ತಾಯಗೊಂಡ ಯುಟಿಟಿ ರಾಷ್ಟ್ರೀಯ ರ್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ, 11 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>